Akashvani: Bangalore
National Bulletin In Kannada
04.09.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
04.09.2026: 13.10hrs
**********

**ಮುಖ್ಯಾಂಶಗಳು :**

1. ಇಸ್ರೋದ ಯಶಸ್ವಿ ಉಡಾವಣೆ ಭಾರತದ ಬಾಹ್ಯಾಕಾಶ ಕ್ಷೇತ್ರದ ಶ್ರೇಷ್ಠತೆಗೆ ಸಾಕ್ಷಿ - ಪ್ರಧಾನಿ ನರೇಂದ್ರ ಮೋದಿ ಶ್ಲಾಘನೆ
2. ನವದೆಹಲಿಯಲ್ಲಿ 'ಬ್ರಿಕ್ಸ್ ಮುಖ್ಯ ನ್ಯಾಯಮೂರ್ತಿಗಳ ಶೃಂಗಸಭೆ' ಆರಂಭ; ನ್ಯಾಯ ವಿತರಣೆ ಸೇರಿ ಸಮಕಾಲೀನ ವಿಷಯಗಳ ಚರ್ಚೆ
3. ದೇಶಾದ್ಯಂತ ಕೃಷ್ಣಜನ್ಮಾಷ್ಟಮಿ ಸಂಭ್ರಮ; ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಸೇರಿ ಗಣ್ಯರಿಂದ ಶುಭಾಶಯ
4. ನೇಪಾಳ ಪ್ರವಾಹ: ಜಲವಿದ್ಯುತ್ ಯೋಜನೆಯ ಸುರಂಗದಲ್ಲಿ ಸಿಲುಕಿದ್ದ ಇಬ್ಬರ ರಕ್ಷಣೆ; ಮೃತರ ಸಂಖ್ಯೆ ೧ ಸಾವಿರದ ೨೮೨ಕ್ಕೆ ಏರಿಕೆ
5. ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್; ಪುರುಷರ ಡಬಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಇಂದು ಭಾರತದ ಸಾತ್ವಿಕ್-ಚಿರಾಗ್ ಜೋಡಿ ಸ್ಪರ್ಧೆ

*****

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭೂಸ್ಥಿರ ಕಕ್ಷೆಯಿಂದ ಭಾರತದ ಮೊಟ್ಟಮೊದಲ ಭೂ ವೀಕ್ಷಣಾ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿರುವುದನ್ನು ಶ್ಲಾಘಿಸಿದ್ದಾರೆ. ಸಾಮಾಜಿಕ ಮಾಧ್ಯಮದ ಪೋಸ್ಟ್‌ನಲ್ಲಿ, ಈ ಯಶಸ್ವಿ ಉಡಾವಣೆ ಭಾರತದ ಬಾಹ್ಯಾಕಾಶ ಕ್ಷೇತ್ರದ ಶ್ರೇಷ್ಠತೆ, ನಾವೀನ್ಯತೆ ಹಾಗೂ ಹೆಚ್ಚುತ್ತಿರುವ ಸಾಮರ್ಥ್ಯಗಳಿಗೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ.ಇಸ್ರೋ ಮತ್ತು ಭಾರತೀಯ ಉದ್ಯಮದ ನಡುವಿನ ಹೆಚ್ಚುತ್ತಿರುವ ಸಹಭಾಗಿತ್ವವು ದೇಶದ ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಹೊಸ ಶಕ್ತಿ ಮತ್ತು ವ್ಯಾಪ್ತಿಯನ್ನು ನೀಡುತ್ತಿದ್ದು, ಸಂಪೂರ್ಣ ಬಾಹ್ಯಾಕಾಶ ಪರಿಸರ ವ್ಯವಸ್ಥೆಯಾದ್ಯಂತ ಭಾರತದ ಸಾಮರ್ಥ್ಯವನ್ನು ವಿಸ್ತರಿಸುತ್ತಿದೆ ಎಂದು ಪ್ರಧಾನಿ ತಿಳಿಸಿದ್ದಾರೆ. ಇಸ್ರೋದ ಈ ಸಾಧನೆಯನ್ನು ಅತ್ಯುತ್ತಮ ಸಾಧನೆ ಎಂದು ಬಣ್ಣಿಸಿರುವ ಪ್ರಧಾನಿ, ಇದು ದೇಶಕ್ಕೆ ಹೆಮ್ಮೆಯ ಕ್ಷಣವಾಗಿದೆ ಎಂದು ಹೇಳಿದ್ದಾರೆ.

*****

ಇಒಎಸ್-೦೫ ಉಪಗ್ರಹವನ್ನು ಹೊತ್ತ ಜಿಎಸ್‌ಎಲ್‌ವಿ-ಎಫ್೧೬ ವಾಹಕ ನೌಕೆಯ ಯಶಸ್ವಿ ಉಡಾವಣೆಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಶ್ಲಾಘಿಸಿದ್ದಾರೆ. ಇಒಎಸ್-೦೫ ಅತ್ಯಾಧುನಿಕ ಭೂ ವೀಕ್ಷಣಾ ಉಪಗ್ರಹವಾಗಿದ್ದು, ಭೂಸ್ಥಿರ ಕಕ್ಷೆಯಿಂದ ಉಡಾವಣೆಯಾಗುತ್ತಿರುವ ಭಾರತದ ಮೊದಲ ಭೂ ವಿಕ್ಷಣಾ ಉಪಗ್ರಹವಾಗಿದೆ. ಇದು ದೃಶ್ಯ, ಅತಿಗೆಂಪು, ಬಹು-ವರ್ಣೀಯ ಕಿರಣಗಳ ಮೂಲಕ ಸುಧಾರಿತ ಚಿತ್ರಣಕ್ಕೆ ಅನುವು ಮಾಡಿಕೊಡಲಿದೆ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಒಎಸ್-೦೫ ಉಪಗ್ರಹದ ಯಶಸ್ವಿ ಉಡಾವಣೆಯನ್ನು ಶ್ಲಾಘಿಸಿ, ಇಸ್ರೋ ಮತ್ತು ಭಾರತೀಯ ಉದ್ಯಮದ ನಡುವಿನ ವಿಸ್ತರಿಸುತ್ತಿರುವ ಸಹಭಾಗಿತ್ವವು ನಾವೀನ್ಯತೆಗೆ ಹೆಚ್ಚಿನ ವ್ಯಾಪ್ತಿ ನೀಡುತ್ತಿದ್ದು, ಸ್ವದೇಶಿ ಸಾಮರ್ಥ್ಯವನ್ನು ಬಲಪಡಿಸುವುದರ ಜೊತೆಗೆ ಭಾರತದ ಬಾಹ್ಯಾಕಾಶ ಮಹತ್ವಾಕಾಂಕ್ಷೆಗಳಿಗೆ ಹೊಸ ಅವಕಾಶಗಳನ್ನು ತೆರೆಯುತ್ತಿದೆ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ತಿಳಿಸಿದ್ದಾರೆ.

*****

ಭಾರತದ ಸರ್ವೋಚ್ಚ ನ್ಯಾಯಾಲಯದ ಆತಿಥ್ಯದಲ್ಲಿ ಮೂರು ದಿನಗಳ 'ಬ್ರಿಕ್ಸ್ ಮುಖ್ಯ ನ್ಯಾಯಮೂರ್ತಿಗಳ ಶೃಂಗಸಭೆ' ನವದೆಹಲಿಯಲ್ಲಿ ಇಂದಿನಿಂದ ಆರಂಭವಾಗಿದೆ. ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಹಾಗೂ ಪಾಲುದಾರ ದೇಶಗಳ ಮುಖ್ಯ ನ್ಯಾಯಮೂರ್ತಿಗಳು, ಸುಪ್ರೀಂ ಕೋರ್ಟ್ ಅಧ್ಯಕ್ಷರು ಮತ್ತು ಹಿರಿಯ ನ್ಯಾಯಾಂಗ ಗಣ್ಯರು ಈ ಶೃಂಗಸಭೆಯಲ್ಲಿ ಭಾಗವಹಿಸಿದ್ದಾರೆ. ನ್ಯಾಯ ವಿತರಣೆ, ಅಂತಾರಾಷ್ಟ್ರೀಯ ವಿವಾದಗಳ ಪರಿಹಾರ, ನ್ಯಾಯಾಂಗದಲ್ಲಿ ಆಧುನಿಕ ತಂತ್ರಜ್ಞಾನ ಹಾಗೂ ಸುಸ್ಥಿರ ಅಭಿವೃದ್ಧಿ ಮುಂತಾದ ಸಮಕಾಲೀನ ವಿಷಯಗಳ ಕುರಿತು ಜಂಟಿ ಚರ್ಚೆ ನಡೆಸಿ, ವಿಚಾರ ವಿನಿಮಯ ಮಾಡಿಕೊಳ್ಳಲು ಈ ವೇದಿಕೆಯು ಅವಕಾಶ ಕಲ್ಪಿಸಿದೆ. ಕಾರ್ಯಕ್ರಮದ ಉದ್ಘಾಟನಾ ದಿನವಾದ ಇಂದು, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಅವರು ವಿವಿಧ ದೇಶಗಳ ನ್ಯಾಯಾಂಗ ನಿಯೋಗಗಳ ಮುಖ್ಯಸ್ಥರೊಂದಿಗೆ ಸರಣಿ ದ್ವಿಪಕ್ಷೀಯ ಸಭೆಗಳನ್ನು ನಡೆಸಲಿದ್ದಾರೆ. ರಷ್ಯಾ, ಚೀನಾ, ಈಜಿಪ್ಟ್, ಇಂಡೋನೇಷ್ಯಾ, ಯುಎಇ, ಬೆಲಾರಸ್, ಕಝಾಕಿಸ್ತಾನ್, ದಕ್ಷಿಣ ಆಫ್ರಿಕಾ, ಇರಾನ್ ಹಾಗೂ ಉಜ್ಬೇಕಿಸ್ತಾನ್ ರಾಷ್ಟ್ರಗಳ ನ್ಯಾಯಾಂಗ ನಾಯಕರೊಂದಿಗೆ ಅವರು ಚರ್ಚೆ ನಡೆಸಲಿದ್ದಾರೆ. ಈ ದ್ವಿಪಕ್ಷೀಯ ಸಭೆಗಳು ಪರಸ್ಪರ ನ್ಯಾಯಾಂಗ ಹಿತಾಸಕ್ತಿಗಳ ವಿಷಯಗಳಲ್ಲಿ ನೇರ ಸಂವಾದಕ್ಕೆ ಅವಕಾಶ ನೀಡುವುದಲ್ಲದೆ, ಪಾಲ್ಗೊಳ್ಳುವ ದೇಶಗಳ ನ್ಯಾಯಾಂಗ ವ್ಯವಸ್ಥೆಗಳ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲಿವೆ. ಭಗವಾನ್ ಶ್ರೀಕೃಷ್ಣನ ಜನ್ಮವನ್ನು ಸಾರುವ ಜನ್ಮಾಷ್ಟಮಿ ಹಬ್ಬವನ್ನು ದೇಶಾದ್ಯಂತ ಇಂದು ಆಚರಿಸಲಾಗುತ್ತಿದೆ. ಶ್ರೀಕೃಷ್ಣನಿಗೆ ವಿಶೇಷ ಪೂಜೆ ಸಲ್ಲಿಸಲು ಭಕ್ತರು ದೇವಾಲಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ತೆರಳುತ್ತಿದ್ದಾರೆ. ಉತ್ತರ ಪ್ರದೇಶದ ಮಥುರಾ ಮತ್ತು ವೃಂದಾವನದಲ್ಲಿ ಶ್ರೀಕೃಷ್ಣನ ಜನ್ಮೋತ್ಸವ ಆಚರಣೆಗಳು ನಡೆಯುತ್ತಿವೆ. ಗುಜರಾತ್‌ನಾದ್ಯಂತ ಜನ್ಮಾಷ್ಟಮಿ ಹಬ್ಬವನ್ನು ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಲಾಗುತ್ತಿದೆ. ವಿಶ್ವಪ್ರಸಿದ್ಧ ದ್ವಾರಕಾಧೀಶ, ದಾಕೋರ್ ಮತ್ತು ಶಾಮಲಾಜಿ ದೇವಾಲಯಗಳು ಸೇರಿದಂತೆ ಪ್ರಮುಖ ಶ್ರೀಕೃಷ್ಣ ದೇವಾಲಯಗಳಲ್ಲಿ ಭವ್ಯ ಆಚರಣೆಗಳು ಹಾಗೂ ವಿಶೇಷ ಪೂಜಾ ವಿಧಿ-ವಿಧಾನಗಳು ನಡೆಯುತ್ತಿವೆ. ಜನ್ಮಾಷ್ಟಮಿ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಶುಭಾಶಯ ಕೋರಿದ್ದಾರೆ. ಭಗವಾನ್ ಶ್ರೀಕೃಷ್ಣರ ಜೀವನ ಮತ್ತು ಸಂದೇಶಗಳು ಸತ್ಯ, ಧರ್ಮ, ಕರ್ತವ್ಯ ಹಾಗೂ ಸದ್ಗುಣದ ಮಾರ್ಗದಲ್ಲಿ ನಡೆಯಲು ಮಾನವಕುಲಕ್ಕೆ ಪ್ರೇರಣೆ ನೀಡುತ್ತವೆ ಎಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹೇಳಿದ್ದಾರೆ. ಭಗವಾನ್ ಶ್ರೀಕೃಷ್ಣರ ದಿವ್ಯ ಸಂದೇಶಗಳಲ್ಲಿ ನಿಸ್ವಾರ್ಥ ಕರ್ಮದ ಆಳವಾದ ಪ್ರೇರಣೆ ಅಡಗಿದೆ. ಇದು ಮಾನವಕುಲಕ್ಕೆ ನಿರಂತರವಾಗಿ ಮಾರ್ಗದರ್ಶನ ನೀಡಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಭಗವಾನ್ ಶ್ರೀಕೃಷ್ಣರು ಎಲ್ಲರ ಮೇಲೂ ತಮ್ಮ ಆಶೀರ್ವಾದವನ್ನು ನಿರಂತರವಾಗಿ ಕರುಣಿಸಲಿ ಎಂದು  ಕೇಂದ್ರ ಗೃಹ ಸಚಿವ ಅಮಿತ್ ಶಾ ಸಾಮಾಜಿಕ ಮಾಧ್ಯಮದಲ್ಲಿ ಶುಭ ಹಾರೈಸಿದ್ದಾರೆ. ಭಗವಾನ್ ಶ್ರೀಕೃಷ್ಣರ ಕೃಪೆಯಿಂದ ದೇಶದಲ್ಲಿ ಸಂತೋಷ, ಶಾಂತಿ, ಸಮೃದ್ಧಿ ಹಾಗೂ ಕ್ಷೇಮ ನೆಲೆಸಲಿ ಮತ್ತು ಪ್ರತಿಯೊಂದು ಕುಟುಂಬದ ಜೀವನದಲ್ಲಿ ಸಂತೋಷ, ಭರವಸೆ ಹಾಗೂ ಹೊಸ ಚೈತನ್ಯ ತುಂಬಲಿ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

*****

ನೇಪಾಳ ಮತ್ತು ಟಿಬೆಟ್ ಗಡಿಭಾಗದಲ್ಲಿ ಸಂಭವಿಸಿದ ಜಲಪ್ರಳಯ ಮತ್ತು ಪ್ರವಾಹದಿಂದಾಗಿ ಮೃತಪಟ್ಟವರ ಸಂಖ್ಯೆ ೧ ಸಾವಿರದ ೨೮೨ ಕ್ಕೆ ಏರಿಕೆಯಾಗಿದೆ. ನೇಪಾಳ ಪೊಲೀಸರ ಪ್ರಕಾರ, ಚಿತ್ವಾನ್‌ನಲ್ಲಿ ಅತ್ಯಧಿಕ ಅಂದರೆ ೩೫೯ ಜನರು ಸಾವನ್ನಪ್ಪಿದ್ದರೆ, ನವಲ್ ಪರಾಸಿ ಈಸ್ಟ್‌ನಲ್ಲಿ ೨೧೮, ನವಲ್ ಪರಾಸಿ ವೆಸ್ಟ್‌ನಲ್ಲಿ ೨೦೮, ನುವಾಕೋಟ್‌ನಲ್ಲಿ ೧೮೫, ರಸುವಾದಲ್ಲಿ ೧೪೦, ಗೋರ್ಖಾದಲ್ಲಿ ೬೨, ಧಾಡಿಂಗ್‌ನಲ್ಲಿ ೯೦ ಮತ್ತು ತನಹುನಲ್ಲಿ ೩೮ ಜನರು ಮೃತಪಟ್ಟಿದ್ದಾರೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಇಬ್ಬರು ಸಂತ್ರಸ್ತರು ಕಠ್ಮಂಡುವಿನಲ್ಲಿ ಕೊನೆಯುಸಿರೆಳೆದಿದ್ದಾರೆ. ರಾಷ್ಟ್ರೀಯ ವಿಕೋಪ ಅಪಾಯ ತಗ್ಗಿಸುವಿಕೆ ಮತ್ತು ನಿರ್ವಹಣಾ ಪ್ರಾಧಿಕಾರದ ವರದಿಯಂತೆ, ಸುಮಾರು ೫ ಸಾವಿರದ ೫೩ ಜನರು ಇನ್ನೂ

ನಾಪತ್ತೆಯಾಗಿದ್ದಾರೆ. ಮೃತದೇಹಗಳ ಪತ್ತೆ ಹಾಗೂ ಗುರುತು ಪತ್ತೆಗೆ ನೇಪಾಳ ಸರ್ಕಾರ ಡಿಎನ್‌ಎ ಪರೀಕ್ಷೆಗಳನ್ನು ಆರಂಭಿಸಿದೆ. ಈ ನಡುವೆ, ಭೋಟೇಕೋಶಿ ಪ್ರವಾಹದಿಂದಾಗಿ ತ್ರಿಶೂಲಿ ೩-ಎ ಜಲವಿದ್ಯುತ್ ಯೋಜನೆಯ ಸುರಂಗದಲ್ಲಿ ಕಳೆದ ೧೦ ದಿನಗಳಿಂದ ಸಿಲುಕಿದ್ದ ಇಬ್ಬರು ವ್ಯಕ್ತಿಗಳನ್ನು ನೇಪಾಳ ಸೇನೆಯು ಜೀವಂತವಾಗಿ ರಕ್ಷಿಸಿದೆ. ಸುರಂಗದ ಒಳಗಿನಿಂದ ಶಬ್ದ ಕೇಳಿಬಂದ ತಕ್ಷಣ ಸಕ್ರಿಯಗೊಂಡ ರಕ್ಷಣಾ ಪಡೆಗಳು ಅವರ ರಕ್ಷಣೆಗೆ ಧಾವಿಸಿದ್ದವು. ರಕ್ಷಣಾ ತಂಡಗಳು ಇಲ್ಲಿಯವರೆಗೆ ೧೨ ಸಾವಿರಕ್ಕೂ ಹೆಚ್ಚು ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಿವೆ.

*****

ಮುಂಬೈನ ಗೇಟ್‌ವೇ ಆಫ್ ಇಂಡಿಯಾ ಸಮೀಪ ಅರಬ್ಬಿ ಸಮುದ್ರದಲ್ಲಿ ನಿನ್ನೆ ರಾತ್ರಿ ಎಂಜಿನ್ ದೋಷದಿಂದ ದೋಣಿಯೊಂದು ಸ್ಥಗಿತಗೊಂಡಿತ್ತು. ಮಾಹಿತಿ ಪಡೆದ ಪೊಲೀಸರು ಅದರಲ್ಲಿದ್ದ ೩೮ ಮಂದಿಯನ್ನು ರಕ್ಷಿಸಿದ್ದಾರೆ. ೩೪ ಪ್ರಯಾಣಿಕರು ಹಾಗೂ ನಾಲ್ವರು ಸಿಬ್ಬಂದಿಯನ್ನು ಹೊತ್ತಿದ್ದ ದೋಣಿ ಸಮುದ್ರ ವಿಹಾರ ಮುಗಿಸಿ ಹಿಂದಿರುಗುತ್ತಿದ್ದಾಗ ರಾತ್ರಿ ಸುಮಾರು ೮:೩೦ಕ್ಕೆ ಕರಾವಳಿಯಿಂದ ಒಂದೂವರೆ ನಾಟಿಕಲ್ ಮೈಲು ದೂರದಲ್ಲಿ ಎಂಜಿನ್ ದೋಷಕ್ಕೀಡಾಗಿ ಸ್ಥಗಿತಗೊಂಡಿತು.

*****

ಇಟಲಿಯ ಪ್ರಧಾನಮಂತ್ರಿ ಜಾರ್ಜಿಯಾ ಮೆಲೋನಿ ಅವರ ಸರ್ಕಾರವು ಎರಡನೇ ಮಹಾಯುದ್ಧದ ನಂತರ ಅತ್ಯಂತ ದೀರ್ಘಾವಧಿ ಆಡಳಿತ ನಡೆಸಿದ ಇಟಲಿ ಸರ್ಕಾರ ಎಂಬ ಐತಿಹಾಸಿಕ ದಾಖಲೆ ಬರೆದಿದೆ. ಮೆಲೋನಿ ನೇತೃತ್ವದ ಸರ್ಕಾರವು ೧ ಸಾವಿರದ ೪೧೩ ದಿನಗಳ ಆಡಳಿತವನ್ನು ಪೂರೈಸುವ ಮೂಲಕ, ೨೦೦೧ ರಿಂದ ೨೦೦೫ ರ ಅವಧಿಯಲ್ಲಿ ದಿವಂಗತ ಸಿಲ್ವಿಯೋ ಬರ್ಲುಸ್ಕೋನಿ ಅವರು ಸ್ಥಾಪಿಸಿದ್ದ ಸುದೀರ್ಘ ಆಡಳಿತದ ದಾಖಲೆಯನ್ನು ಮೀರಿಸಿದೆ. ಕಳೆದ ೮೦ ವರ್ಷಗಳಲ್ಲಿ ಸುಮಾರು ೭೦ ಸರ್ಕಾರಗಳನ್ನು ಕಂಡಿರುವ ರಾಜಕೀಯ ಅಸ್ಥಿರತೆಯ ಇಟಲಿಯಲ್ಲಿ ಈ ಮೈಲಿಗಲ್ಲು ಮೆಲೋನಿ ಅವರ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸಲಿದ್ದು, ೨೦೨೭ರ ಸಾರ್ವತ್ರಿಕ ಚುನಾವಣೆಯ ಹೊಸ್ತಿಲಿನಲ್ಲಿ ಆಡಳಿತಾರೂಢ ಸರ್ಕಾರಕ್ಕೆ ಹೆಚ್ಚಿನ ಬಲ ಸಿಗಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

*****

ಚೀನಾದ ಶೆನ್‌ಝೆನ್‌ನಲ್ಲಿ ನಡೆಯುತ್ತಿರುವ ಚೀನಾ ಮಾಸ್ಟರ್ಸ್ ಸೂಪರ್ ೭೫೦ ಬ್ಯಾಡ್ಮಿಂಟನ್ ಪಂದ್ಯಾವಳಿಯ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿಂದು ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಡೆನ್ಮಾರ್ಕ್‌ನ ಕಿಮ್ ಆಸ್ಟ್ರಪ್ ಮತ್ತು ಆಂಡರ್ಸ್ ಸ್ಕಾರುಪ್ ರಾಸ್‌ಮುಸೆನ್ ಜೋಡಿ ವಿರುದ್ಧ ಸೆಣಸಲಿದೆ. ಪ್ರಿ-ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ, ಫ್ರಾನ್ಸ್‌ನ ಕ್ರಿಸ್ಟೋ ಮತ್ತು ಟೋಮಾ ಜೂನಿಯರ್ ಪೊಪೊವ್ ಸಹೋದರರ ವಿರುದ್ಧ ೨೧-೧೫, ೨೨-೨೪, ೨೧-೯ ಅಂತರದಿಂದ ಗೆಲುವು ಸಾಧಿಸಿತು. ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿಂದು ಭಾರತದ ಕಿಡಂಬಿ ಶ್ರೀಕಾಂತ್ ಹೊಂಗ್ ಕಾಂಗ್‌ನ ಲೀ ಚೆಕ್ ಯು ವಿರುದ್ಧ ಪರಾಭವಗೊಂಡು ಪಂದ್ಯಾವಳಿಯಿಂದ ಹೊರಬಿದ್ದರು.

***END***